# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಸಿಡಿ/2324/2021 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಒ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 22/04/2022

26

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಶ್ರೀನಿವಾಸ ಮೂರ್ತಿ @ ಮೂರ್ತಿ ಬಿನ್ ಕೇ. ಶಂಕರಪ್ಪ, ಡಾಟಾ ಎಂಟ್ರಿ ಆಪರೇಟರ್, ಸಹಾಯಕ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆ ಇಲಾಖೆ, ವ್ಯಾಟ್ –46, 1 ನೇ ಮಹಡಿ, ರಕ್ಷಿತ್ ಕಾಂಪ್ಲೆಕ್ಸ್, 9ನೇ ಕ್ರಾಸ್, ಇಂದಿರಾನಗರ, ಬೆಂಗಳೂರು ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಬೆಂಗಳೂರು ನಗರ ವಿಭಾಗ ಇವರು ಬೆಂಗಳೂರು ನಗರ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಶ್ರೀನಿವಾಸ ಮೂರ್ತಿ @ ಮೂರ್ತಿ ಬಿನ್ ಕೇ. ಶಂಕರಪ್ಪ, ಡಾಟಾ ಎಂಟ್ರಿ ಆಪರೇಟರ್, ಸಹಾಯಕ ಆಯುಕ್ತರ ಕಛೇರಿ, ವಾಣಿಜ್ಯ ತೆರಿಗೆ ಇಲಾಖೆ, ವ್ಯಾಟ್ –46, 1 ನೇ ಮಹಡಿ, ರಕ್ಷಿತ್ ಕಾಂಪ್ಲೆಕ್ಸ್, 9ನೇ ಕ್ರಾಸ್, ಇಂದಿರಾನಗರ, ಬೆಂಗಳೂರು (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರನ್ನು ಶ್ರೀ ರಾಘವೇಂದ್ರ ಎಸ್. ಆರ್. ಬಿನ್ ರಾಮಯ್ಯ, ನಂ. 389/ಎ, 1ನೇ ಕ್ರಾಸ್, ಭಂಗಿಯಪ್ಪ ಗಾರ್ಡನ್, ಲಕ್ಷ್ಮೀ ರಸ್ತೆ, ಶಾಂತಿನಗರ, ಬೆಂಗಳೂರು-560027 (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) <u>ದೂರಿನ ಸಂಕ್ಷಿಪ್ತ ವಿವರಣೆ:-</u> ದೂರುದಾರರು ವಾಣಿಜ್ಯ ತೆರಿಗೆ ಇಲಾಖೆಯ ಎಲ್.ವಿ.–45, ಇಂದಿರಾನಗರ ಬೆಂಗಳೂರು ಇಲ್ಲಿ ನೋಂದಣಿ ಮಾಡಿಕೊಂಡು ಪ್ರತಿ ತಿಂಗಳು ವ್ಯವಹಾರ

ರಿಟರ್ನ್‌ಗಳನ್ನು ಫೈಲ್ ಮಾಡುತ್ತಿದ್ದರು. ನಂತರ ಸುಮಾರು ಒಂದುವರೆ ವರ್ಷಗಳ ಹಿಂದೆ ಕೆಲಸದ ಒತ್ತಡಗಳಿಂದ ಸಂಸ್ಥೆಯ ಮೂರು ತಿಂಗಳ ರಿಟರ್ನ್‌ಗಳನ್ನು ವಾಣಿಜ್ಯ ತೆರಿಗೆ ಇಲಾಖೆಗೆ ಸಲ್ಲಿಸದೇ ಇದ್ದ ಕಾರಣ ವಾಣಿಜ್ಯ ತೆರಿಗೆ ಇಲಾಖೆಯು ದೂರುದಾರರ ಸಂಸ್ಥೆಗೆ ನೀಡಿದ್ದ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಸ್ಥಗಿತಗೊಳಿಸಿರುತ್ತಾರೆ. ಆದ್ದರಿಂದ ದೂರುದಾರರಿಗೆ ರಿಟರ್ನ್ಸ್ ಫೈಲ್ ಮಾಡಲು ಸಾಧ್ಯವಾಗದ ಕಾರಣ ಎದುರುದಾರರನ್ನು ಭೇಟಿಯಾಗಿ ರಿಟರ್ನ್ಸ್ ಫೈಲ್ ಮಾಡಲು ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ನೀಡುವಂತೆ ಕೇಳಿದಾಗ ಸದರಿಯವರು ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ನೀಡಲು 8,000/- ರೂ.ಗಳ ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ. ದೂರುದಾರರು ಕಡಿಮೆ ಮಾಡಿಕೊಳ್ಳುವಂತೆ ಕೋರಿಕೊಂಡಾಗ ಅಂತಿಮವಾಗಿ 5,000/- ರೂ.ಗಳನ್ನು ನೀಡುವಂತೆ ಒತ್ತಾಯಿಸಿದ್ದು ಸದರಿಯವರ ನಡುವೆ ಆದಂತಹ ಸಂಭಾಷಣೆಯ ದೃಶ್ಯಾವಳಿಗಳನ್ನು ಮೊಬೈಲ್ ಕ್ಯಾಮರಾದಲ್ಲಿ ಚಿತ್ರೀಕರಿಸಿ ರೆಕಾರ್ಡಿಂಗ್‌ನ್ನು ಸಿ.ಡಿ.ಗೆ ವರ್ಗಾಯಿಸಿರುತ್ತಾರೆ. ಸದರಿ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ದೂರುದಾರರು ಬೆಂಗಳೂರು ನಗರ ಎ.ಸಿ.ಬಿ. ಪೊಲೀಸ್ ಠಾಣೆಗೆ ದೂರನ್ನು ದಿನಾಂಕ 21/02/2017 ರಂದು ನೀಡಿರುತ್ತಾರೆ. ಈ ಬಗ್ಗೆ ಬೆಂಗಳೂರು ನಗರ ಎ.ಸಿ.ಬಿ. ಠಾಣೆಯ ಅಧಿಕಾರಿಗಳು ದೂರನ್ನು ಪಡೆದು ತಮ್ಮ ಠಾಣೆಯ ಗುನ್ನೆ ನಂ. 07/2017 ರಲ್ಲಿ ಪ್ರಕರಣ ನೋಂದಾಯಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ದಿನಾಂಕ 21/02/2017 ರಂದು ನೆರಳು ಸಾಕ್ಷಿ ಹಾಗೂ ಸಹ ಪಂಚರನ್ನು ಬರ ಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ಅವರಿಂದ ದೂರಿನ ವಿಷಯವನ್ನು ತಿಳಿದ ನಂತರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿದ ಸಂಭಾಷಣೆಯನ್ನು ಸಿ.ಡಿ.ಗೆ ವರ್ಗಾಯಿಸಿಕೊಂಡು ದೂರನ್ನು ಸಲ್ಲಿಸಿದ್ದು ಸದರಿ ಸಿ.ಡಿ.ಯನ್ನು ಪಂಚರಿಗೆ ಕೇಳಿಸಿ, ಅಪೀಕರಣ ಮಾಡಿ ವಶಪಡಿಸಿಕೊಂಡಿರುತ್ತಾರೆ. ನಂತರ ಲಂಚದ ಹಣ ರೂ. 5,000/- ಅನ್ನು ದೂರುದಾರರು ಹಾಜರುಪಡಿಸಿದ್ದು, ಅವುಗಳ ಮುಖಬೆಲೆ ಮತ್ತು ನೋಟಿನ ಸಂಖ್ಯೆ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿ ಪಂಚರ ಮತ್ತು ತನಿಖಾಧಿಕಾರಿಗಳ ಸಹಿ ಪಡೆದಿರುತ್ತಾರೆ. ಸದರಿ ಹಣಕ್ಕೆ ಪಿನಾಪ್ತಲಿನ್ ಪೌಡರ್ ಲೇಪಿಸಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿ ಸದರಿ ದ್ರಾವಣದಲ್ಲಿ ನೋಟುಗಳಿಗೆ ಪಿನಾಪ್ತಲಿನ್ ಪೌಡರ್ ಲೇಪಿಸಿದ ಪಂಚನ ಕೈ ಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೆಗೆದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಈ ಬಗ್ಗೆ ಮಾದರಿ ದ್ರಾವಣ ಹಾಗೂ ಗುಲಾಬಿ ಬಣ್ಣಕ್ಕೆ

ತಿರುಗಿದ ದ್ರಾವಣವನ್ನು ಪ್ರತ್ಯೇಕವಾಗಿ ವಶಪಡಿಸಿಕೊಂಡು ಹಂತ ಹಂತವಾಗಿ ಫೋಟೋಗಳನ್ನು ತೆಗೆಸಿ, ಪ್ರಕರಣದ ಮಾಹಿತಿ ಗೌಪ್ಯತೆಯನ್ನು ಕಾಪಾಡಿಕೊಳ್ಳಲು ತನಿಖಾಧಿಕಾರಿಯವರು ಸೂಚಿಸಿರುತ್ತಾರೆ. ಶ್ರೀ ಶೇಖರ್ ಎಸ್ ಬಿನ್ ಲೇಟ್ ಶ್ರೀನಿವಾಸ, ಎಸ್.ಡಿ.ಎ. ಆಯುಕ್ತರ ಕಛೇರಿ, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಬೆಂಗಳೂರು ಇವರನ್ನು ನೆರಳು ಸಾಕ್ಷಿಯಾಗಿ ನೇಮಿಸಿ, ದೂರುದಾರರೊಂದಿಗೆ ಎದುರುದಾರರ ಬಳಿ ಹೋಗಿ ಅವರಿಗೆ ಅನುಮಾನ ಬಾರದಂತೆ ಮತ್ತು ಎದುರುದಾರರು ಹಾಗೂ ದೂರುದಾರರ ನಡುವೆ ನಡೆದ ಸಂಭಾಷಣೆಯನ್ನು ಕೇಳಿಸಿಕೊಂಡು ಘಟನೆಯನ್ನು ವೀಕ್ಷಿಸಿ, ಎದುರುದಾರರು ಹಣವನ್ನು ಕೇಳಿ ಪಡೆದುಕೊಂಡರೆ, ಹಣವನ್ನು ಹೇಗೆ ಪಡೆದುಕೊಳ್ಳುತ್ತಾರೆ, ಹಣವನ್ನು ಎಲ್ಲಿ ಇಟ್ಟುಕೊಳ್ಳುತ್ತಾರೆ ಎಂಬುದನ್ನು ಗಮನಿಸಿ ನಂತರ ತಿಳಿಸಬೇಕೆಂದು ತನಿಖಾಧಿಕಾರಿಯವರು ತಿಳಿಸಿರುತ್ತಾರೆ. ದೂರುದಾರರಿಗೆ ವಾಯ್ಸ್ ರೆಕಾರ್ಡರ್‌ನಲ್ಲಿ ಸಂಭಾಷಣೆಯನ್ನು ರೆಕಾರ್ಡ್ ಮಾಡುವಂತೆ ಸೂಚಿಸಿದ್ದು ಇರುತ್ತದೆ. ದೂರುದಾರರಿಗೆ ಎದುರುದಾರರು ಲಂಚದ ಹಣ ಬೇಡಿಕೆ ಇಟ್ಟು ಸ್ವೀಕರಿಸಿದ ನಂತರ ತನ್ನ ಕೈಯಿಂದ ತಲೆ ಒರೆಸಿಕೊಳ್ಳುವುದರ ಮೂಲಕ ಸಂಜ್ಞೆ ನೀಡಬೇಕೆಂದು ಸೂಚಿಸಿರುತ್ತಾರೆ. ಈ ಬಗ್ಗೆ ಸವಿಸ್ತಾರ ಪ್ರಾಯೋಗಿಕ ಪಂಚನಾಮೆಯನ್ನು ನಿರ್ವಹಿಸಿರುತ್ತಾರೆ.

4) ದಿನಾಂಕ 21/02/2017 ರಂದು ಇಂದಿರಾನಗರದ 1ನೇ ಸ್ಟೇಜ್, 3ನೇ ಮೈನ್, 9ನೇ ಕ್ರಾಸ್ ಮೂಲೆಯಲ್ಲಿರುವ ಶ್ರೀನಿಧಿ ಬೇಕರಿ ಎದುರಿನ ರಸ್ತೆಯ ಮತ್ತೊಂದು ಬದಿಯಲ್ಲಿರುವ ಬಿಬಿಎಂಪಿ ಕಂಪೌಂಡಿಗೆ ಹೊಂದಿಕೊಂಡಿರುವ ಫುಟ್‌ಪಾತ್ ಮೇಲೆ ದೂರುದಾರರು ನೆರಳು ಸಾಕ್ಷಿ ಶ್ರೀ ಶೇಖರ್ ಎಸ್. ಬಿನ್ ಲೇಟ್ ಶ್ರೀನಿವಾಸ, ಎಸ್.ಡಿ.ಎ. ಆಯುಕ್ತರ ಕಛೇರಿ, ಭೂ ಮಾಪನ ಕಂದಾಯ ವ್ಯವಸ್ಥೆ ಮತ್ತು ಭೂ ದಾಖಲೆಗಳ ಇಲಾಖೆ, ಕೆ.ಆರ್. ವೃತ್ತ ಬೆಂಗಳೂರು ಇವರ ಸಮಕ್ಷಮ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ನೀಡಲು ಎದುರುದಾರರು ದೂರುದಾರರಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟಾಗ ದೂರುದಾರರು ಪಿನಾಪ್ತಲಿನ್ ಪೌಡರ್ ಲೇಪಿತ 5,000/- ರೂಪಾಯಿಗಳ ಲಂಚದ ಹಣವನ್ನು ನೀಡಿದ್ದು ಎದುರುದಾರರು ಬಲಗೈಯಿಂದ ಪಡೆದುಕೊಂಡು ಎರಡೂ ಕೈಗಳಿಂದ ಎಣಿಸಿ ತಾನು ಧರಿಸಿದ್ದ ಪ್ಯಾಂಟಿನ ಹಿಂಭಾಗದ ಬಲ ಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ದೂರುದಾರರು ತಮ್ಮ ಕೈಯಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ತನಿಖಾಧಿಕಾರಿಯವರು

ಪಂಚರ ಸಮಕ್ಷಮ ಸದರಿ ಲಂಚದ ಹಣವಾದ 5,000/-ರೂಪಾಯಿಗಳನ್ನು ಎದುರುದಾರರಿಂದ ಅಮಾನತ್ತು ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಎದುರುದಾರರ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಎದುರುದಾರರಿಗೆ ಬದಲಿ ಪ್ಯಾಂಟಿನ ವ್ಯವಸ್ಥೆಯನ್ನು ಮಾಡಿ ಅವರ ಪ್ಯಾಂಟನ್ನು ಬಿಚ್ಚಿಸಿಕೊಂಡು ಪ್ಯಾಂಟಿನ ಹಿಂಬದಿಯ ಬಲ ಭಾಗದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಸದರಿ ದ್ರಾವಣಗಳನ್ನು ಹಾಗೂ ಪ್ಯಾಂಟನ್ನು ಪಂಚರ ಸಮಕ್ಷಮ ಅಮಾನತ್ ಪಡಿಸಿಕೊಂಡಿರುತ್ತಾರೆ. ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ತನಿಖಾಧಿಕಾರಿಗಳು ನೆರಳು ಸಾಕ್ಷಿ ಶ್ರೀ ಶೇಖರ್ ಎಸ್ ಬಿನ್ ಲೇಟ್ ಶ್ರೀನಿವಾಸ, ಸಹ ಪಂಚ ಅವರಿಂದ ಅಲ್ಲಿಯ ನಡುವಳಿಕೆಗಳನ್ನು ತಿಳಿದು ಸವಿಸ್ತಾರ ಜಪ್ತಿ ಪಂಚನಾಮೆ ನಿರ್ವಹಿಸಿ, ದೂರುದಾರರ ಹಾಗೂ ಪಂಚರ ಸಮಕ್ಷಮ ಸದರಿ ಹಣವನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿರುತ್ತಾರೆ.

5) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರನ್ನು ವಿಚಾರಿಸಿದಾಗ "ದೂರುದಾರರಿಗೆ ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ನೀಡಿದ್ದು ದೂರುದಾರರಿಂದ ಹಣವನ್ನು ನಾನು ಪಡೆದಿರುವುದಿಲ್ಲ" ಎಂದು ಸಮಜಾಯಿಷಿ ನೀಡಿರುತ್ತಾರೆ. ಆದರೆ ಇದು ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಆಗಿರುವುದಿಲ್ಲ. ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ ದೂರುದಾರರ ಮತ್ತು ಎದುರುದಾರರ ನಡುವಿನ ಸಂಭಾಷಣೆಯಲ್ಲಿ ಸ್ಪಷ್ಟವಾಗಿ ಮೂಡಿಬಂದಿರುತ್ತದೆ. ಈ ಬಗ್ಗೆ ನೆರಳು ಸಾಕ್ಷಿಯಾದ ಶ್ರೀ ಶೇಖರ್‌ರವರು ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ.

6) ತನಿಖಾಧಿಕಾರಿಯವರು ಸವಿಸ್ತಾರ ಜಪ್ತಿ ಪಂಚನಾಮೆ ಪೂರೈಸಿದ ನಂತರ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ ಮತ್ತು ಇತರ ಅಂಶಗಳು, ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

8) ಧ್ವನಿ ವಿಶ್ಲೇಷಣಾ ವರದಿ, ವಿಧಿ ವಿಜ್ಞಾನ ಪ್ರಯೋಗಾಲಯದಿಂದ ಬಂದಿರುವುದಿಲ್ಲ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇರುವುದು ದೃಢಪಟ್ಟಿರುತ್ತದೆ.

9) ಪರಿವೀಕ್ಷಣಾ ಟಿಪ್ಪಣಿಗೆ ದಿನಾಂಕ 29/11/2021 ರ ಸಮಜಾಯಿಷಿಯನ್ನು ಎದುರುದಾರರು ದಿನಾಂಕ 04/12/2021 ರಂದು ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ "ನಾನು ಯಾವುದೇ ಹಣದ ಆಮಿಷವನ್ನು ಒಡ್ಡಿರುವುದಿಲ್ಲ. ಕಟ್ಟಬೇಕಾದ ಟ್ಯಾಕ್ಸ್ ಅನ್ನು ನನ್ನ ಬಳಿ ಕೊಟ್ಟು ಅದನ್ನು ಲಂಚದ ಹಣವೆಂದು ಹೇಳಿ ನನ್ನ ವಿರುದ್ಧ ಸದರಿ ರಾಘವೇಂದ್ರ ರವರು ದುರುದ್ದೇಶ ಪಿರ್ಯಾದಿಯನ್ನು ನೀಡಿರುತ್ತಾರೆ. ಆದುದರಿಂದ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಾನು ಯಾವುದೇ ಲಂಚದ ಹಣವನ್ನು ಕೇಳದಿದ್ದರೂ ಲಂಚವೆಂದು ಭಾವಿಸಿ ಸುಳ್ಳು ಪಿರ್ಯಾದಿ ನೀಡಿರುತ್ತಾರೆ." ಸದರಿಯವರು ತಮ್ಮ ಸಮಜಾಯಿಷಿಯಲ್ಲಿ ಪ್ರಕರಣದ ಸಂಪೂರ್ಣ ವಿಷಯವನ್ನು ನಿರಾಕರಿಸಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಟತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

10) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) 2021 ನಿಯಮ 3 (1) (i ರಿಂದ iii) ರ ಅಡಿಯಲ್ಲಿ ದುರ್ನಡತೆ/ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ

ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಬೇಕೆಂದೂ ಕೋರಿದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

26/4/22

(ನ್ಯಾಯಮೂರ್ತಿ ಬಿ. ಎಸ್. ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು.